ಅಸಮಾನತೆಯು ಅವಕಾಶಗಳ ಅಸಮಾನತೆಯತ್ತ ಹೋಗುವುದನ್ನು ಗಮನಿಸಬೇಕು. ಈ ನಿಟ್ಟಿನಲ್ಲಿ ದೆಹಲಿಯಲ್ಲಿ ಕೇಜ್ರಿವಾಲರು ಸರ್ಕಾರಿ ಶಾಲೆಗಳು ಉತ್ತಮ ಮಟ್ಟದ ಶಿಕ್ಷಣ ಮತ್ತು ಆರೋಗ್ಯ ಸದುಪಾಯಗಳನ್ನು ಒದಗಿಸುತ್ತಿರುವ ಯತ್ನಗಳನ್ನು ಗುರುತಿಸಬೇಕಾಗಿದೆ. ಆದರೆ, ಸುಂದರ ಕಟ್ಟಡಗಳು ಮತ್ತು ಕ್ಷಮತೆಯ ತತ್ಪರತೆಗೆ ವಿಚಾರಧಾರೆಯ ಲೇಪವಿಲ್ಲದಿದ್ದರೆ ಅದು ವಿಸ್ತೃತ ಮಟ್ಟದಲ್ಲಿ ಹೇಗೆ ಗತಿಹೀನವಾಗಬಹುದು ಎನ್ನುವುದನ್ನೂ ನಾವು ಕಾಣಬೇಕಾಗಿದೆ.

ಒಮ್ಮೆ ರಿಜರ್ವ್ ಬ್ಯಾಂಕಿನ ಗವರ್ನರ್ ಆಗಿದ್ದ ವೈ.ವಿ. ರೆಡ್ಡಿ ಆರ್ಥಿಕ ಒಳಗೊಳ್ಳುವಿಕೆಯನ್ನು ಪರಿಭಾಷಿಸುತ್ತಾ ಅದರ ಮಿತಿಗಳನ್ನು ಉಲ್ಲೇಖಿಸಿದ್ದರು. ಜನತೆಗೆ ಬೇಕಾಗಿರುವ – ಸಾಮಾಜಿಕ, ರಾಜಕೀಯ, ಮತ್ತು ಅವಕಾಶಗಳ ಒಳಗೊಳ್ಳುವಿಕೆಯನ್ನು ಸಾಧಿಸದೇ ಆರ್ಥಿಕ ಒಳಗೊಳ್ಳುವಿಕೆ ಸಾಧ್ಯವಿಲ್ಲ ಎಂದಿದ್ದರು. ಸಾಮಾಜಿಕ ಒಳಗೊಳ್ಳುವಿಕೆಗೆ ತಕ್ಕ ಪರಿಭಾಷೆಯನ್ನು ಅಂಬೇಡ್ಕರ್ ತಮ್ಮ 'ಜಾತಿಗಳ ನಿರ್ಮೂಲನೆ' (ಅಥವಾ ಜಾತಿಗಳ ಸರ್ವನಾಶ ಎನ್ನಬೇಕೆ) ಎನ್ನುವ ಭಾಷಣದಲ್ಲಿ ನೀಡಿದ್ದರು. ಈ ಮೂಲಭೂತ ತಾರತಮ್ಯವಾದದ ಬದಲಾವಣೆಯಿಲ್ಲದೇ ಬೇರೇನೂ ಬದಲಾಗುವುದಿಲ್ಲ. ಹಿಂದೂ ಸಮಾಜವೆಂದು ನಾವು ಕಟ್ಟಿಕೊಂಡಿರುವ ಪದ್ಧತಿಯಲ್ಲಿಯೇ ಇರುವ ಅಸಮಾನತೆಯ ಮಾತುಗಳನ್ನು ಅಂಬೇಡ್ಕರ್ ಹೇಳಿದ್ದರು. ರಾಜಕೀಯ ಒಳಗೊಳ್ಳುವಿಕೆಯನ್ನು ರೆಡ್ಡಿಯವರು ಓಟಿನ ಹಕ್ಕಾಗಿ ಪರಿಭಾಷಿಸಿ, ಇತರ ವಿಕಸಿತ ದೇಶಗಳಿಗಿಂತ ಮೊದಲೇ ನಮ್ಮಲ್ಲಿ ಸಾರ್ವತ್ರಿಕ ಓಟಿನ ಹಕ್ಕು ದಕ್ಕಿತ್ತೆಂದು ಸಂಭ್ರಮದಿಂದ ಹೇಳಿದ್ದಂತೆ ನೆನಪು. ಆದರೆ, ತೇಲ್ತುಂಬ್ಡೆಯವರ ಬರಹವನ್ನು ಓದಿದಾಗ ರಾಜಕೀಯ ಒಳಗೊಳ್ಳುವಿಕೆ ಓಟಿನ ಹಕ್ಕಿಗೆ ಸೀಮಿತವಾಗಿಸುವುದರಲ್ಲಿ ಇರುವ ಸಂಕುಚಿತ ದೃಷ್ಟಿಯು ನಮಗೆ ಕಾಣಸಿಗುತ್ತದೆ. ಈ ಹಿನ್ನೆಲೆಯಲ್ಲಿ ಭಾರತದ ಪ್ರಾತಿನಿಧಿತ್ವದ ಸಂರಚನೆಯಲ್ಲಿ ಮುಳುವಾದ ಪೂನಾ ಒಪ್ಪಂದವನ್ನು ತೇಲ್ತುಂಬ್ಡೆ ವಿಸ್ತಾರವಾಗಿ ಚರ್ಚಿಸುತ್ತಾರೆ. ಜಾತಿಯ ಅಸಮಾನತೆಯನ್ನು ನಾಶಮಾಡುವ ಉದ್ದೇಶವಿರುವಾಗಲೇ ನಮ್ಮ ರಾಜಕೀಯ ಸಂರಚನೆಯ ಮೂಲಭೂತ ಸ್ವರೂಪ ಮತ್ತು ಆರಕ್ಷಣೆಯ ಸ್ವರೂಪ ಜಾತಿವ್ಯವಸ್ಥೆಯನ್ನು ವಿಚಿತ್ರ ರೀತಿಯಲ್ಲಿ ಬಲಪಡಿಸುತ್ತಿರುವ ವಿರೋಧಾಭಾಸವನ್ನೂ ಎತ್ತಿತೋರಿಸುತ್ತಾರೆ.

ಈ ದೇಶದ ಚುನಾವಣಾ ಪದ್ಧತಿಯಲ್ಲಿ ಅಂಬೇಡ್ಕರ್ ಅವರಂತಹ ಪ್ರಖರ ವ್ಯಕ್ತಿ ಚುನಾವಣೆಯನ್ನು ಗೆಲ್ಲಲಾರದ ವಿರೋಧಾಭಾಸವನ್ನು ಚರ್ಚಿಸುವಲ್ಲಿಯೇ ಈ ಪ್ರಶ್ನೆಯೂ ಅಡಕವಾಗಿದೆ. ರಾಮದಾಸ ಅಠವಳೆ ಮತ್ತು ರಾಮ್ ವಿಲಾಸ್ ಪಾಸ್ವಾನರು ಅಧಿಕಾರದಲ್ಲಿ ಉಳಿಯಲು ಸವರ್ಣೀಯರೊಂದಿಗೆ ಮಾಡಿಕೊಳ್ಳಬೇಕಾದ ಒಪ್ಪಂದ ಮತ್ತು ಸಮಜಾಯಿಷಿಗಳು ರಾಜಕೀಯ ಒಳಗೊಳ್ಳುವಿಕೆಯಲ್ಲಿರುವ ಅಂತರ್ ವಿರೋಧವನ್ನು ಕಾಣಿಸುತ್ತದೆ.

ಪುಸ್ತಕದ ಒಂದಷ್ಟು ಭಾಗ ವಿವಿಧ ಪಕ್ಷಗಳ ನಿಲುವುಗಳ ಮಥನದಲ್ಲಿ ತೊಡಗುತ್ತದೆ. ಮುಖ್ಯವಾಗಿ ಹಿಂದುತ್ವವಾದಿ ಪರಿಭಾಷೆಯಲ್ಲಿ ಅಂಬೇಡ್ಕರ್ ಅವರನ್ನು ಮಾತ್ರ ಒಂದು ಪ್ರತೀಕವಾಗಿ, ಪ್ರಾತಃಸ್ಮರಣೀಯರಾಗಿ, ತೀರ್ಥಯಾತ್ರಾ ಪುರುಷರಾಗಿ ತೋರಿಸುತ್ತಲೇ ದಲಿತ ಸಮುದಾಯಗಳ ಮೇಲಿನ ದಮನವನ್ನು ದಾಖಲಿಸುತ್ತಾರೆ. ಪುಸ್ತಕದಲ್ಲಿರುವ ಖೈರ್ಲಾಂಜಿ, ಉನಾ ಕಾಂಡಗಳಿಗೆ ಈಗ ನಾವು ಭೀಮಾ ಕೋರೇಗಾಂವ್ ಕಾಂಡವನ್ನೂ ಜೋಡಿಸಿ ನೋಡಬೇಕು. ಅಂಬೇಡ್ಕರ್ ಪ್ರತಿಮೆಗಳಲ್ಲಿ ಬಾಬಾಸಾಹೇಬರ ಕೈಲಿ ಸಂವಿಧಾನದ ಒಂದು ಪ್ರತಿಯನ್ನು ಸಿಕ್ಕಿಸಿ, ನಮ್ಮ ಸಂವಿಧಾನದ ಕರ್ತೃ ಎಂದು ಸಾರುತ್ತಿರುವ ಈ ಸಂದರ್ಭದಲ್ಲಿ, ಬಾಬಾಸಾಹೇಬರು ಸಂವಿಧಾನ ಸಂರಚನಾ ಸಭೆಯ ಅಧ್ಯಕ್ಷರಾಗಿದ್ದಾಗಲೂ ಅದರಲ್ಲಿನ ಕೆಲವು ಭಾಗಗಳ ಬಗ್ಗೆ ಇದ್ದ ತೀವ್ರ ಭಿನ್ನಾಭಿಪ್ರಾಯವನ್ನು ತೇಲ್ತುಂಬ್ಡೆ ಚರ್ಚಿಸುತ್ತಾರೆ. ಸಂವಿಧಾನ ಒಂದು ಪವಿತ್ರ ಗ್ರಂಥ ಎಂದು ವಾದಿಸುವವರು ಅದರ ಮೂಲಭೂತ ಆಶಯವನ್ನೇ ಪಣಕ್ಕೊಡ್ಡುತ್ತಾ, ಅದನ್ನು ತಿದ್ದುಪಡಿ ಮಾಡುತ್ತಾ ಮುಂದುವರೆಯುತ್ತಿರುವುದು ಒಂದು ಪ್ರಹಸನವಲ್ಲದೆ ಬೇರೇನು?

ಗಾಂಧಿ ಮತ್ತು ಅಂಬೇಡ್ಕರ್ ನಡುವೆ ಇದ್ದ ಭಿನ್ನಾಭಿಪ್ರಾಯವು ಸರ್ವವಿದಿತ. ದಲಿತ ಸಮುದಾಯದಲ್ಲಿ, ಅದರಲ್ಲೂ ಸಫಾಯಿ